

ಭಾರತ ಮತ ಮಹಾ ಸಮರ

## ಸಮಾಚಾರ ಸಣ್ಣದಲ್ಲ

### ಚುನಾವಣೆ: 2ನೇ ಹಂತದ ಅಧಿಸೂಚನೆ

**ದೆಹಲಿ:** ಘೋಷಿತ ಹಲವು ಹಂತಗಳ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಭಾರತೀಯ ಚುನಾವಣಾ ಆಯೋಗ ಗುರುವಾರ 2ನೇ ಹಂತದ ಅಧಿಸೂಚನೆ ಹೊರಡಿಸಿದೆ. 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 88 ಲೋಕಸಭಾ ಕ್ಷೇತ್ರಗಳಿಗೆ ಏ.26ರಂದು ಮತದಾನ ನಡೆಯಲಿರುವ ಬಗ್ಗೆ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿನ 14 ಲೋಕಸಭಾ ಕ್ಷೇತ್ರಗಳು ಸೇರಿದಂತೆ ಕೇರಳ, ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ, ಅಸ್ಸಾಂ, ಛತ್ತೀಸ್‌ಗಢ, ಉತ್ತರಪ್ರದೇಶ, ತ್ರಿಪುರಾ, ಪಶ್ಚಿಮ ಬಂಗಾಳ, ಜಮ್ಮು-ಕಾಶ್ಮೀರದಲ್ಲಿನ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ಅಧಿಸೂಚನೆ ಹೊರಡಿಸಲಾಗಿದೆ. ತಿಂಗಳುಗಳ ಕಾಲ ಸತತ ಹಿಂಸಾಚಾರದಿಂದ ನಲುಗಿರುವ ಮಣಿಪುರ ರಾಜ್ಯದಲ್ಲಿ 2 ಹಂತಗಳಲ್ಲಿ ಚುನಾವಣೆ ನಡೆಸಲು ಆಯೋಗ ನಿರ್ಧರಿಸಿದೆ. ಔಟರ್ ಮಣಿಪುರ ಕ್ಷೇತ್ರಕ್ಕೂ 2 ಹಂತಗಳಲ್ಲಿ ಮತದಾನ ನಡೆಯಲಿದೆ. 15 ವಿಧಾನಸಭಾ ಕ್ಷೇತ್ರಗಳಲ್ಲಿ ಏ.19ರಂದು, 13 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಏ.26ರಂದು ಮತದಾನ ನಿಗದಿಯಾಗಿದೆ.

### ಶಿವಸೇನೆ 8 ಕ್ಷೇತ್ರ ಅಭ್ಯರ್ಥಿ ಪ್ರಕಟ

**ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ 'ಶಿವಸೇನೆ' ಪಕ್ಷ, ಪ್ರಸ್ತುತ ನಡೆಯುತ್ತಿರುವ ಲೋಕಸಭಾ ಚುನಾವಣೆಗೆ ರಾಜ್ಯದ



8 ಲೋಕಸಭಾ ಕ್ಷೇತ್ರಗಳಿಗೆ ಗುರುವಾರ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಅದರಲ್ಲಿ 7 ಕ್ಷೇತ್ರಗಳಲ್ಲಿ ಹಾಲಿ ಸಂಸದರಿಗೇ ಟಿಕೆಟ್ ನೀಡಲಾಗಿದೆ. ಉಳಿದಂತೆ ಇತ್ತೀಚೆಗಷ್ಟೇ ಶಿವಸೇನೆಗೆ ಸೇರ್ಪಡೆಯಾಗಿದ್ದ ಕಾಂಗ್ರೆಸ್‌ನ ಮಾಜಿ ಶಾಸಕ ರಾಜು ಪಾರ್ವೆ ಅವರಿಗೆ ರಾಮ್‌ತೆಕ್(ಎಸ್‌ಸಿ ಮೀಸಲು) ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಈ ಕ್ಷೇತ್ರದಲ್ಲಿ ಏ.19ರಂದು ಮತದಾನ ನಡೆಯಲಿದೆ. ಈ ಕ್ಷೇತ್ರವನ್ನು 2019ರಿಂದ ಶಿವಸೇನೆಯ ಸಂಸದ ಕೃಪಾಲ್ ತುಮಾನೆ ಪ್ರತಿನಿಧಿಸಿದ್ದಾರೆ. ಮುಂಬೈ ದಕ್ಷಿಣ ಮಧ್ಯ ಕ್ಷೇತ್ರದಿಂದ ರಾಹುಲ್ ಶೇವಾಳೆ, ಕೊಲ್ಹಾಪುರದಿಂದ ಸಂಜಯ್ ಮಾಂಡಲೀಕ್, ಶಿರಡಿ(ಎಸ್‌ಸಿ) ಮೀಸಲು ಕ್ಷೇತದಿಂದ ಸದಾಶಿವ ಲೋಖಂಡೆ, ಬುಲ್ದಾನಾ ಕ್ಷೇತ್ರದಿಂದ ಪ್ರತಾಪರಾವ್ ಜಾಧವ್, ಹಿಂಗೋಲಿ ಕ್ಷೇತ್ರದಿಂದ ಹೇಮಂತ್ ಪಾಟೀಲ್, ಮವಾಲ್ ಕ್ಷೇತ್ರದಿಂದ ಶ್ರೀರಂಗ ಬರ್ನೆ ಮತ್ತು ಹತ್ಕನಂಗಾಲೆ ಕ್ಷೇತ್ರದಿಂದ ಧೈರ್ಯಶೀಲ್ ಮಾನೆ ಅವರಿಗೆ ಟಿಕೆಟ್ ನೀಡಲಾಗಿದೆ. ಏಳೂ ಮಂದಿ ಹಾಲಿ ಸಂಸದರೇ ಆಗಿದ್ದಾರೆ.

2019ರಲ್ಲಿ ನಡೆದ ಲೋಕಸಭಾ ಚುನಾವಣೆ ವೇಳೆ ಅವಿಭಜಿತ ಶಿವಸೇನೆ ಎನ್‌ಡಿಎ ಮೈತ್ರಿಕೂಟದಲ್ಲಿತ್ತು. 18 ಲೋಕಸಭಾ ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. 2022ರಲ್ಲಿ ಪಕ್ಷ ವಿಭಜನೆ ಆದಾಗ ಅವರಲ್ಲಿ 13 ಸಂಸದರು ಏಕನಾಥ ಶಿಂದೆ ಅವರ ಬಣದ ಜತೆ ಗುರುತಿಸಿಕೊಂಡರು.

## ಈ ಕ್ಷೇತ್ರ ಗೊತ್ತ?



### ಅರುಣಾಚಲ ಪಶ್ಚಿಮ

ಇಲ್ಲಿಂದ 2014ರಿಂದಲೂ ಕೇಂದ್ರ ಸಚಿವ ಕಿರಣ್ ರಿಜಿಜು ಆಯ್ಕೆಯಾಗುತ್ತಿದ್ದಾರೆ. 1977ರಲ್ಲಿ ಈ ಕ್ಷೇತ್ರ ರಚನೆಯಾಗಿದ್ದು, ಆಗಿನಿಂದ ಕಾಂಗ್ರೆಸ್ ಏಳು, ಬಿಜೆಪಿ ಮೂರು ಬಾರಿ ಆಯ್ಕೆಯಾಗಿವೆ. ಇಲ್ಲಿ ಒಮ್ಮೆ ಸ್ವತಂತ್ರ ಅಭ್ಯರ್ಥಿಯೂ ಗೆದ್ದಿದ್ದರು.



**ಇತಿಹಾಸ**

ಅರುಣಾಚಲ ಪ್ರದೇಶದ ರಾಜಕೀಯ ಇತಿಹಾಸದಲ್ಲಿ ಇದು ಅತ್ಯಂತ ಪ್ರಮುಖ ಕ್ಷೇತ್ರ. ತವಾಂಗ್, ವೆಸ್ಟ್ ಕೆಮೆಂಗ್, ಈಸ್ಟ್ ಕೆಮೆಂಗ್, ಪಾಪುಮ್ ಪಾರೆ, ಲೋವರ್ ಸುಬಾನ್ಸಿರಿ, ಕುರುಂಗ್ ಕುಮೇ, ಉಪ್ಪರ್ ಸುಬಾನ್ಸಿರಿ ಮತ್ತು ವೆಸ್ಟ್ ಸಿಯಾಂಗ್ ಜಿಲ್ಲೆಗಳನ್ನು ಸೇರಿಸಿ ಈ ಕ್ಷೇತ್ರ ರಚಿಸಲಾಗಿದೆ. 1977ರಲ್ಲಿ ಈ ಕ್ಷೇತ್ರ ರಚನೆಯಾಗಿದ್ದು ಆರಂಭದಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. ಈ 12 ಬಾರಿಯಲ್ಲಿ ಕಾಂಗ್ರೆಸ್ 7 ಬಾರಿ ಗೆದ್ದಿದೆ. ಬಿಜೆಪಿ ಮೂರು ಬಾರಿ ಗೆದ್ದಿದೆ. ಒಮ್ಮೆ ಸ್ವತಂತ್ರ ಅಭ್ಯರ್ಥಿಯೂ ಗೆದ್ದಿದ್ದಾರೆ. ಇಲ್ಲಿ ಶೇ.20ರಷ್ಟು ಕ್ರೈಸ್ತರು, ಶೇ.20 ಹಿಂದೂಗಳು ಮತ್ತು ಶೇ.60ರಷ್ಟು ಇತರೆ ಧರ್ಮೀಯರಿದ್ದಾರೆ. ನಗರ ಮತದಾರರು ಶೇ.26ರಷ್ಟಿದ್ದರೆ, ಶೇ.74ರಷ್ಟು ಗ್ರಾಮೀಣ ಮತದಾರರಿದ್ದಾರೆ. ಶೇ.79.7 ರಷ್ಟು ಎಸ್‌ಟಿ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ಅರುಣಾಚಲ ಪ್ರದೇಶದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕಿರಣ್ ರಿಜಿಜು ಇಲ್ಲಿಂದ ಮತ್ತೆ ಸ್ಪರ್ಧೆ ಬಯಸಿದ್ದಾರೆ. 1999ರಲ್ಲಿ ಒಮ್ಮೆ ಬಿಜೆಪಿ ಮತ್ತು 2014 ಹಾಗೂ 2019ರಲ್ಲಿ ಮತ್ತೆ ಬಿಜೆಪಿಯೇ ಗೆದ್ದಿದೆ.

**ಕಳೆದ ಮೂರು ಫಲಿತಾಂಶ**

- 2019 - ಬಿಜೆಪಿ
- 2014 - ಬಿಜೆಪಿ
- 2009 - ಕಾಂಗ್ರೆಸ್

**ಕ್ಷೇತ್ರ ವಿಶೇಷ**

- ಕೇಂದ್ರ ಸಚಿವ ಕಿರಣ್ ರಿಜಿಜು ಮೂರು ಬಾರಿ ಗೆದ್ದಿದ್ದಾರೆ.
- ಕಾಂಗ್ರೆಸ್ ಏಳು ಬಾರಿ ಗೆದ್ದಿರುವುದು ವಿಶೇಷ.
- ಎಸ್‌ಟಿಗೆ ಸೇರಿದವರೇ ಶೇ.79ಕ್ಕಿಂತ ಹೆಚ್ಚಿದ್ದಾರೆ.

# ಹರ್ಯಾಣದಲ್ಲಿ ಯಾರಿಗೆ ಗೆಲುವಿನ ಹರಿವಾಣ?

**ಪಂಜಾಬ್ ಜತೆಗೆ ಗಡಿ ಹಂಚಿಕೊಂಡಿರುವ ಮತ್ತು 1967ಕ್ಕೂ ಮುನ್ನ ಒಟ್ಟಾಗಿಯೇ ಇದ್ದ ಹರ್ಯಾಣದಲ್ಲಿ ಈಗ ರಾಜಕೀಯ ಕಾವು ಜೋರಾಗಿದೆ. ಬಿಜೆಪಿ ಮತ್ತು ಜೆಜೆಪಿ ಬೇರೆಯಾಗಿದ್ದು, ಇತ್ತೀಚೆಗಷ್ಟೇ ಬಿಜೆಪಿ ಸಿಎಂ ಬದಲಾವಣೆ ಮಾಡಿದೆ. ಕಳೆದ ಬಾರಿ ಎಲ್ಲ 10 ಸ್ಥಾನ ಗೆದ್ದಿದ್ದ ಬಿಜೆಪಿ, ಇದನ್ನು ಪುನರಾವರ್ತಿಸಲು ನೋಡುತ್ತಿದೆ. ಆದರೆ, ಕಾಂಗ್ರೆಸ್ ತನ್ನ ಬಲ ಹೆಚ್ಚಿಸಿಕೊಳ್ಳಲು ತಂತ್ರಗಾರಿಕೆ ರೂಪಿಸಿದೆ.**

**ರಾಜಕೀಯ ಇತಿಹಾಸ**


1967ರಲ್ಲಿ ಸ್ಥಾಪನೆಯಾಗಿರುವ ಈ ರಾಜ್ಯದಲ್ಲಿ ಆರಂಭದಿಂದಲೂ ಕಾಂಗ್ರೆಸ್‌ನದ್ದೇ ಆಳ್ವಿಕೆ. ಆದರೆ, ನಂತರದ ದಿನಗಳಲ್ಲಿ ಇಲ್ಲಿ ಸಣ್ಣಪುಟ್ಟ ಪಕ್ಷಗಳು, ಭಾರತೀಯ ಜನಸಂಘ, ಬಿಜೆಪಿ, ಹರ್ಯಾಣ ವಿಕಾಸ ಪಾರ್ಟಿ, ಇಂಡಿಯನ್ ನ್ಯಾಷನಲ್ ಲೋಕದಳ ಸೇರಿದಂತೆ ವಿವಿಧ ಪಕ್ಷಗಳು ಪ್ರವರ್ಧಮಾನಕ್ಕೆ ಬಂದವು. ಇಲ್ಲಿ ರಾಜಕೀಯ ಪಕ್ಷಗಳು ಇಂಥದ್ದೇ ಪಕ್ಷಕ್ಕೆ ಅಂತ ಸತತವಾಗಿ ಮತ ಹಾಕುವುದಿಲ್ಲ. ಎಲ್ಲರಿಗೂ ಅವಕಾಶ ಕೊಟ್ಟು ನೋಡುವ ಅಭ್ಯಾಸವೂ ಇದೆ. 2019ರಲ್ಲಿ ಇಲ್ಲಿ ಬಿಜೆಪಿ 10ಕ್ಕೆ ಗೆದ್ದಿತ್ತು. ಆದರೆ ಈ ಬಾರಿ ಕಾಂಗ್ರೆಸ್ ಪ್ರತಿರೋಧ ನೀಡಲು ಸರ್ವರೀತಿಯಲ್ಲೂ ಸಿದ್ಧತೆ ಮಾಡಿಕೊಂಡಿದೆ.

ಹರ್ಯಾಣ ರಾಜ್ಯ ರಚನೆಯಾಗಿದ್ದೇ 4ನೇ ಲೋಕಸಭೆ ಚುನಾವಣೆ ವೇಳೆ. 1967ರ ಮೊದಲ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಬಲ ಸಾಧಿಸಿತ್ತು. ಆಗ 9 ಸ್ಥಾನಗಳಿದ್ದು ಏಳರಲ್ಲಿ ಕಾಂಗ್ರೆಸ್, ಒಂದು ಜನಸಂಘ ಮತ್ತು ಸ್ವತಂತ್ರ ಅಭ್ಯರ್ಥಿ ಮತ್ತೊಂದನ್ನು ಗೆದ್ದುಕೊಂಡಿದ್ದರು. 1971ರಲ್ಲಿ ಕಾಂಗ್ರೆಸ್ ಏಳು, ಬಿಜೆಎಸ್ 1 ಮತ್ತು ವಿಶಾಲ್ ಹರ್ಯಾಣ ಪಾರ್ಟಿ 1ರಲ್ಲಿ ಗೆದ್ದಿತ್ತು. ಆದರೆ, ತುರ್ತು ಪರಿಸ್ಥಿತಿ ಬಳಿಕ ನಡೆದ 1977ರ ಚುನಾವಣೆಯಲ್ಲಿ ಜನತಾ ಪಾರ್ಟಿ ಮತ್ತು ಬಿಎಲ್‌ಡಿ ಎಲ್ಲ 10 ಕ್ಷೇತ್ರಗಳನ್ನೂ ಗೆದ್ದವು. ಈ ಚುನಾವಣೆ ಹೊತ್ತಿಗೆ ಇಲ್ಲಿನ ಲೋಕಸಭಾ ಕ್ಷೇತ್ರ 9ರಿಂದ 10ಕ್ಕೆ ಏರಿಕೆಯಾಗಿತ್ತು.

1980ರಲ್ಲಿ ಕಾಂಗ್ರೆಸ್(ಇಂದಿರಾ) 5, ಜೆಪಿಎಸ್ 4, ಜೆಪಿ 1 ಸ್ಥಾನದಲ್ಲಿ ಗೆದ್ದರೆ, 1984ರಲ್ಲಿ ಎಲ್ಲ 10 ಕ್ಷೇತ್ರಗಳೂ ಕಾಂಗ್ರೆಸ್ ಪಾಲಾಗಿದ್ದವು. 1989ರಲ್ಲಿ ಜನತಾದಳ 6, ಕಾಂಗ್ರೆಸ್ 4, 1991ರಲ್ಲಿ ಕಾಂಗ್ರೆಸ್ 9, ವಿಶಾಲ ಹರ್ಯಾಣ ಪಾರ್ಟಿ 1, 1996ರಲ್ಲಿ ಬಿಜೆಪಿ 4, ಎಚ್‌ವಿಪಿ 3, ಕಾಂಗ್ರೆಸ್ 2, ಸ್ವತಂತ್ರ 1, 1998ರಲ್ಲಿ ಎಚ್‌ಎಲ್‌ಡಿಆರ್ 4, ಬಿಎಸ್‌ಪಿ 1, ಕಾಂಗ್ರೆಸ್ 3, ಎನ್‌ಡಿಎ 2ರಲ್ಲಿ ಗೆದ್ದಿದ್ದವು.

1999ರಲ್ಲಿ ಬಿಜೆಪಿ 5 ಮತ್ತು ಅಂಗಪಕ್ಷ ಐಎನ್‌ಎಲ್‌ಡಿ 5ರಲ್ಲಿ ಗೆದ್ದರೆ, 2004ರಲ್ಲಿ ಕಾಂಗ್ರೆಸ್ 9, ಬಿಜೆಪಿ 1ರಲ್ಲಿ ಗೆದ್ದಿದ್ದವು. 2009ರಲ್ಲಿ ಕಾಂಗ್ರೆಸ್ 9, ಎಚ್‌ಜೆಸಿ(ಬಿಎಲ್) 1, 2014ರಲ್ಲಿ ಬಿಜೆಪಿ 7, ಐಎನ್‌ಎಲ್‌ಡಿ 2 ಮತ್ತು ಕಾಂಗ್ರೆಸ್ 1 ಸ್ಥಾನ ಗೆದ್ದಿದ್ದವು. 2019ರಲ್ಲಿ ಬಿಜೆಪಿ ಕ್ಲೀನ್ ಸ್ವೀಪ್ ಮಾಡಿತ್ತು.

**ಹರ್ಯಾಣ**



**ಮತದಾರರು**


- ಒಟ್ಟು - 1,83,90,525
- ಪುರುಷ - 98,78,042
- ಮಹಿಳಾ - 85,12,231
- ಇತರೆ - 252

**2019ರ ಫಲಿತಾಂಶ**

| | |
|---|---|
| ಒಟ್ಟು ಸ್ಥಾನ | 10 |
| ಬಿಜೆಪಿ | 10 |
| ಕಾಂಗ್ರೆಸ್ | 00 |




**ಪ್ರಮುಖ ನಾಯಕರು**



ಮನೋಹರ್ ಲಾಲ್ ಕಟ್ಟರ್ | ನಯಾಬ್ ಸಿಂಗ್ ಸೈನಿ | ದುಷ್ಯಂತ್ ಚೌಟಾಲ | ಸಾವಿತ್ರಿ ಜಿಂದಾಲ್ | ಭೂಪಿಂದರ್ ಸಿಂಗ್ ಹೂಡಾ | ದೀಪಂದರ್ ಸಿಂಗ್ ಹೂಡಾ

**ರಾಜಕೀಯ ಪಕ್ಷಗಳ ಸ್ಥಿತಿಗತಿ**

**ಬಿಜೆಪಿ**

ಕಳೆದ ಬಾರಿ 10ಕ್ಕೆ 10 ಗೆದ್ದಿದ್ದ ಬಿಜೆಪಿ ಚೆನ್ನಾಗಿಯೇ ಚುನಾವಣಾ ತಯಾರಿ ನಡೆಸಿದೆ. ಮಾಜಿ ಸಿಎಂ ಮನೋಹರ ಲಾಲ್ ಕಟ್ಟರ್ ಕರ್ನಲ್‌ನಿಂದ ಲೋಕಸಭೆಗೆ ಇಳಿಯಲಿದ್ದಾರೆ. ಕಾಂಗ್ರೆಸ್‌ನ ಸಾವಿತ್ರಿ ಜಿಂದಾಲ್ ಮತ್ತು ನವೀನ್ ಜಿಂದಾಲ್ ಬಿಜೆಪಿ ಸೇರಿದ್ದಾರೆ. ಜೆಜೆಪಿ ಜತೆಗಿನ ಮೈತ್ರಿ ಮುರಿದಿರುವುದರಿಂದ ಪ್ರತ್ಯೇಕ ಮತಬುಟ್ಟಿಗೆ ಕೈ ಹಾಕಲು ಬಿಜೆಪಿ ಮುಂದಾಗಿದೆ.

**ಕಾಂಗ್ರೆಸ್**

ಕಾಂಗ್ರೆಸ್ ಇಲ್ಲಿ ಬಲಿಷ್ಠವಾಗಿಯೇ ಇದೆ. 2019ರಲ್ಲಿ ಎಲ್ಲ ಕ್ಷೇತ್ರಗಳನ್ನು ಕಳೆದುಕೊಂಡರೂ, ಈ ಬಾರಿ ವಾಪಸ್ ಪಡೆಯುವ ಲೆಕ್ಕಾಚಾರದಲ್ಲಿದೆ. ಭೂಪಿಂದರ್ ಸಿಂಗ್ ಹೂಡಾ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧೆ ಮಾಡದೇ ಇರುವುದು ಒಂದು ಸೆಟ್‌ಬ್ಯಾಕ್. ಜತೆಗೆ ಪ್ರಮುಖ ನಾಯಕರು ಪಕ್ಷ ತ್ಯಜಿಸಿದ್ದಾರೆ. ಆದರೂ ದೀಪಂದರ್ ಸಿಂಗ್ ಹೂಡಾ ಪಕ್ಷ ಕಟ್ಟುವ ಲೆಕ್ಕಾಚಾರದಲ್ಲಿದ್ದಾರೆ.

**ಐಎನ್‌ಎಲ್‌ಡಿ**

ಇತ್ತೀಚೆಗಷ್ಟೇ ಬಿಜೆಪಿ ಜತೆ ಮೈತ್ರಿ ಮುರಿದುಕೊಂಡಿರುವ ರಾಷ್ಟ್ರೀಯ ಲೋಕದಳ ಸ್ವತಂತ್ರವಾಗಿ ಸ್ಪರ್ಧೆ ಮಾಡಲು ನಿರ್ಧರಿಸಿದೆ. ಎಲ್ಲ 10 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ದುಷ್ಯಂತ್ ಚೌಟಾಲಾ ಅವರೇ ಪಕ್ಷದ ಬೆನ್ನೆಲುಬು. ಬಿಜೆಪಿ ಓಟಕ್ಕೆ ತಡೆ ನೀಡಲು ಸರ್ವರೀತಿಯಲ್ಲೂ ಸಜ್ಜಾಗಿದೆ.

**ಚುನಾವಣಾ ವಿಷಯಗಳು**

**1. ಸರಕಾರ ಬದಲಾವಣೆ**

ಇತ್ತೀಚೆಗಷ್ಟೇ ಇಲ್ಲಿ ಬಿಜೆಪಿ ಸಿಎಂ ಬದಲಾವಣೆ ಮಾಡಿದೆ. ಮೊದಲು ಮನೋಹರ್ ಲಾಲ್ ಕಟ್ಟರ್ ಅವರು ಸಿಎಂ ಆಗಿದ್ದರು. ಆಗ ಬಿಜೆಪಿ ಮತ್ತು ಜೆಜೆಪಿ ಮೈತ್ರಿ ಮಾಡಿಕೊಂಡಿದ್ದವು. ಲೋಕಸಭೆ ಟಿಕೆಟ್ ವಿಚಾರದಲ್ಲಿ ಸಹಮತ ಮೂಡದೇ ಮೈತ್ರಿ ಮುರಿಯಿತು. ಸದ್ಯ ಬಿಜೆಪಿಯ ನಯಾಬ್ ಸಿಂಗ್ ಸೈನಿ ಸಿಎಂ ಆಗಿದ್ದಾರೆ. ದಿಢೀರನೇ ಸಿಎಂ ಬದಲಿಸಿದ್ದು ಏಕೆ ಎಂಬುದು ಚರ್ಚಾಸ್ಪದವಾಗಿದೆ.

**2. ಮೈತ್ರಿ ಭಂಗ**

ದುಷ್ಯಂತ್ ಚೌಟಾಲ ಅವರ ಜೆಜೆಪಿ ಮತ್ತು ಬಿಜೆಪಿ ನಡುವಿನ ಮೈತ್ರಿ ಮುರಿದು ಬಿದ್ದಿದೆ. ಬಿಜೆಪಿ ಮೈತ್ರಿಧರ್ಮ ಪಾಲನೆ ಮಾಡಿಲ್ಲ ಎಂಬುದು ಜೆಜೆಪಿ ಆರೋಪ. ಇದೂ ಚುನಾವಣೆಯಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇದೆ.

**3. ಕುಸ್ತಿ ಹೋರಾಟ**

ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸಿದವರು ಹರ್ಯಾಣದ ಕುಸ್ತಿ ಆಟಗಾರರೇ. ಕೇಂದ್ರ ಸರಕಾರ ನಮಗೆ ನ್ಯಾಯ ಕೊಡಿಸಿಲ್ಲ ಎಂಬ ಆರೋಪ ಕುಸ್ತಿ ಆಟಗಾರರದ್ದು. ಇದು ಚುನಾವಣೆಯಲ್ಲಿ ಸದ್ದು ಮಾಡುವ ಸಂಭವಗಳಿವೆ.

## ಎಂದೂ ಪಿಲಿಭಿತ್ ಬಿಟ್ ಹೋಗಲ್ಲ: ವರುಣ್

### ಜನರ ಜತೆಗಿನ ಸಂಬಂಧ ರಾಜಕೀಯ ಮೀರಿದ್ದು; ಮತದಾರರಿಗೆ ಪತ್ರ

**ಲಖನೌ:** ಯಾವುದೇ ಕಾರಣಕ್ಕೂ ಪಿಲಿ ಭಿತ್ ಲೋಕಸಭಾ ಕ್ಷೇತ್ರದಿಂದ ದೂರವಾ ಗುವುದಿಲ್ಲ ಎಂದು ಬಿಜೆಪಿ ಸಂಸದ ವರು ಣ್ ಗಾಂಧಿ ಭಾವುಕವಾಗಿ ಹೇಳಿದ್ದಾರೆ.

ಸಾಮಾನ್ಯ ಜನರ ಪರ ಧ್ವನಿ ಎತ್ತಲೆಂದೇ ರಾಜಕೀಯಕ್ಕೆ ಬಂದೆ. ಎಷ್ಟೇ ಬೆಲೆ ತೆತ್ತಾದರೂ ಈ ಕೆಲಸ ಮುಂದುವರಿಸುವೆ. ಅದಕ್ಕೆ ನಿಮ್ಮ ಆಶೀರ್ವಾದ ಕೋರುವೆ. ಈ ಪತ್ರ ಬರೆಯುವಾಗ ಅಸಂಖ್ಯ ನೆನಪುಗಳು ಭಾವುಕವಾಗಿಸಿವೆ. 1983ರಲ್ಲಿ ಮೊದಲ ಬಾರಿಗೆ ಪಿಲಿಭಿತ್ ಕ್ಷೇತ್ರಕ್ಕೆ ಅಮ್ಮನ ಕೈಬೆರಳು ಹಿಡಿದು ಬಂದಾಗ ನನಗೆ 3 ವರ್ಷ. ಆ ದಿನಗಳು ಈಗಲೂ ನೆನಪಿವೆ. ಈ ನೆಲ ನನ್ನ ರಾಜಕೀಯ ಬದುಕಿನ ಕರ್ಮಭೂಮಿ ಆಗುತ್ತದೆ, ಇಲ್ಲಿನ ಜನ ನನ್ನ ಕುಟುಂಬವಾಗುತ್ತಾರೆ ಎಂದು ಆ 3 ವರ್ಷದ ಮಗುವಿಗೆ ಹೇಗೆ ಗೊತ್ತಾ ಯಿತು? ಪಿಲಿಭಿತ್ ಜನರ ಸೇವೆಯ ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟ.

ಪಿಲಿಭಿತ್ ಕ್ಷೇತ್ರದಿಂದ ಪಡೆದ ಅನುಭ ವಗಳು, ಗುಣಗಳು ಸಂಸದನಾಗಿ, ವ್ಯಕ್ತಿ ಯಾಗಿ ನನ್ನ ಬೆಳವಣಿಗೆಗೆ ನೆರವಾಗಿವೆ. ನಿಮ್ಮ ಪ್ರತಿನಿಧಿಯಾಗಿರುವುದು, ನಿಮ್ಮ



ಹಿತಾಸಕ್ತಿಗಾಗಿ ದನಿ ಎತ್ತುವುದು ಜೀವನದ ದೊಡ್ಡ ಗೌರವ. ಸಂಸದನಾಗಿ ಅಧಿಕಾ ರಾವಧಿ ಮುಗಿದರೂ ಪಿಲಿಭಿತ್ ಸಂಬಂಧ ಕೊನೆ ಉಸಿರಿರುವವರೆಗೂ ಇರುತ್ತದೆ. ಮಗನಾಗಿ ನಿಮ್ಮ ಸೇವೆ ಮಾಡಲು ಬದ್ಧನಾ ಗಿದ್ದೇನೆ. ಪಿಲಿಭಿತ್ ಜನರಿಗೆ ನನ್ನ ಮನೆಯ ಬಾಗಿಲು ಸದಾ ತೆರೆದಿರುತ್ತದೆ. ಪಿಲಿಭಿತ್ ಜತೆಗಿನ ಸಂಬಂಧ ಪ್ರೀತಿ-ನಂಬಿಕೆಯ ವಿಷಯ. ಮುಂದೆಯೂ ನಿಮ್ಮವನಾಗಿ ರುವೆ... ಎಂದು ವರುಣ್ ಗಾಂಧಿ ಪತ್ರ ಕೊನೆಗೊಳಿಸಿದ್ದಾರೆ.

**ಅಮ್ಮನ ಪರ ಪ್ರಚಾರ**

ಬಿಜೆಪಿ ಈ ಬಾರಿ ವರುಣ್‌ಗೆ ಟಿಕೆಟ್ ನಿರಾಕರಿಸಿದೆ. ಪಿಲಿಭಿತ್ ಕ್ಷೇತ್ರದಿಂದ ಜಿತಿನ್ ಪ್ರಸಾದ್ ಅವರಿಗೆ ಈ ಬಾರಿ ಟಿಕೆಟ್ ನೀಡಲಾಗಿದೆ. ಟಿಕೆಟ್ ನಿರಾಕರಣೆ ಬಳಿಕ ಕ್ಷೇತ್ರದ ಮತದಾರರಿಗೆ ವರುಣ್ ಗುರುವಾರ ಭಾವನಾತ್ಮಕ ಪತ್ರ ಬರೆದಿದ್ದಾರೆ. ಪತ್ರವನ್ನು ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ವರುಣ್ ಗಾಂಧಿ ಅವರ ತಾಯಿ ಮನೇಕಾ ಗಾಂಧಿ ಅವರಿಗೆ ಬಿಜೆಪಿ ಸುಲ್ತಾನ್‌ಪುರ ಟಿಕೆಟ್ ನೀಡಿದೆ. ಅಲ್ಲಿ ಅಮ್ಮನ ಪರ ವರುಣ್ ಪ್ರಚಾರ ನಡೆಸಲಿದ್ದಾರೆ.

## ಆತ್ಮಹತ್ಯೆಗೆ ಯತ್ನಿಸಿದ್ದ ಸಂಸದ ಗಣೇಶಮೂರ್ತಿ ನಿಧನ

### ಈರೋಡ್ ಕ್ಷೇತ್ರ: 2ನೇ ಬಾರಿ ಸ್ಪರ್ಧೆಗೆ ಅವಕಾಶ ಸಿಗದ್ದಕ್ಕೆ ನೊಂದು ಆತ್ಮಹತ್ಯೆ

**ಚೆನ್ನೈ:** ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಗದ ಹಿನ್ನೆಲೆಯಲ್ಲಿ ನೊಂದು ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಗೆ ದಾಖಲಾಗಿದ್ದ ಎಂಡಿಎಂಕೆ ಪಕ್ಷದ ನಾಯಕ, ಈರೋಡ್ ಲೋಕಸಭಾ ಕ್ಷೇತ್ರ ಸದಸ್ಯಗಣೇಶ ಮೂರ್ತಿ(77) ಗುರುವಾರ ಕೊನೆಯುಸಿರೆಳೆದರು.



ಗಣೇಶಮೂರ್ತಿ ಮಾ.24ರಂದು ತಮ್ಮ ನಿವಾಸದಲ್ಲಿ ವಿಷಯುಕ್ತ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣವೇ ಅವರನ್ನು ಸಮೀಪದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಕೊಯಮತ್ತೂರಿನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಈ ಸಂಬಂಧ ಈರೋಡ್ ಟೌನ್ ಪೊಲೀಸರು ಆತ್ಮಹತ್ಯೆ ಯತ್ನ ಪ್ರಕರಣ ದಾಖಲಿಸಿದ್ದರು.

5 ದಿನಗಳ ಕಾಲ ಸಾವು-ಬದುಕಿನ ನಡುವೆ ಹೋರಾಡಿದ ಗಣೇಶ ಮೂರ್ತಿ, ಚಿಕಿತ್ಸೆ ಫಲಿಸದೆ ಗುರುವಾರ ಬೆಳಗ್ಗೆ ಕೊನೆಯುಸಿರೆಳೆದರು. ಮರಣೋತ್ತರ ಪರೀಕ್ಷೆಗಾಗಿ ಇನ್‌ಸ್ಟಿಟ್ಯೂಟ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ (ಐಆರ್‌ಟಿ) ವೈದ್ಯಕೀಯ ಕಾಲೇಜಿಗೆ ಮೃತದೇಹ ಕೊಂಡೊಯ್ಯಲಾಗಿದೆ. ಬಳಿಕ ಕುಮಾರವಲಸು ಗ್ರಾಮದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಗಣೇಶ್ ಮೂರ್ತಿ ಎಂಡಿಎಂಕೆ ಪಕ್ಷದ ಹಿರಿಯ ನಾಯಕ, 2019ರ ಲೋಕಸಭೆ ಚುನಾವಣೆಯಲ್ಲಿ ಈರೋಡ್ ಕ್ಷೇತ್ರದಿಂದ ಡಿಎಂಕೆ ಮೈತ್ರಿಕೂಟದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು, ಸಂಸದರಾಗಿದ್ದರು. ಈ ಬಾರಿಯೂ ಅದೇ ಕ್ಷೇತ್ರದಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವ ನಿರೀಕ್ಷೆಯಲ್ಲಿದ್ದರು. ಆದರೆ, ಈ ಬಾರಿ ಎಂಡಿಎಂಕೆ ಯಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳದ ಕಾರಣ ಸ್ಪರ್ಧೆಗೆ ಗಣೇಶಮೂರ್ತಿ ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ಇದರಿಂದ ಬಹಳವಾಗಿ ನೊಂದುಕೊಂಡಿದ್ದರು ಎಂದು ಹೇಳಲಾಗಿದೆ.

## ಕಾಂಗ್ರೆಸ್‌ನ 8ನೇ ಪಟ್ಟಿಯಲ್ಲಿ 4 ರಾಜ್ಯದ 14 ಕ್ಷೇತ್ರಕ್ಕೆ ಟಿಕೆಟ್

### ಕುತೂಹಲ ಕಾಯ್ದುಕೊಂಡ ಗಾಂಧಿ ಪರಿವಾರದ ಅಮೇಥಿ, ರಾಯ್‌ಬರೇಲಿ

**ದೆಹಲಿ:** ಪ್ರಸ್ತುತ ನಡೆಯುತ್ತಿರುವ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಪಕ್ಷ 8ನೇ ಪಟ್ಟಿಯನ್ನು ಪ್ರಕಟಿಸಿದ್ದು, ತೆಲಂಗಾಣ,-4 ಉತ್ತರ ಪ್ರದೇಶ-4, ಜಾರ್ಖಂಡ್-3, ಮಧ್ಯಪ್ರದೇಶ-3 ಸೇರಿ ಒಟ್ಟು 14 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ತೆಲಂಗಾಣ



ರಾಜ್ಯದ ಆದಿಲಾಬಾದ್ ಕ್ಷೇತ್ರಕ್ಕೆ ಡಾ.ಸುಗುಣ ಕುಮಾರಿ ಚೆಲಿವಾಲಾ, ನಿಜಾಮಬಾದ್ ಕ್ಷೇತ್ರಕ್ಕೆ ಟಿ.ಜೀವನರೆಡ್ಡಿ, ಮೇದಕ್ ಕ್ಷೇತ್ರಕ್ಕೆ ನೀಲಮ್ ಮಧು ಮತ್ತು ಭೋಂಗೀರ್ ಕ್ಷೇತ್ರಕ್ಕೆ ಚಾಲಮ ಕಿರಣ ಕುಮಾರ್ ರೆಡ್ಡಿ ಹೆಸರು ಅಖೈರಾಗಿದೆ. ಉತ್ತರ ಪ್ರದೇಶ ರಾಜ್ಯದ ಘಾಜಿಯಾಬಾದ್ ಕ್ಷೇತ್ರದಲ್ಲಿ ಡಾಲಿ ಶರ್ಮಾ, ಬುಲಂದಶಹರ್‌ಗೆ ಶಿವರಾಂ ವಾಲ್ಮೀಕಿ, ಸೀತಾಪುರಕ್ಕೆ ನುಕುಲ್ ದುಬೇ ಮತ್ತು ಮಹಾರಾಜ್‌ಗಂಜ್ ಕ್ಷೇತ್ರಕ್ಕೆ ವೀರೇಂದ್ರ ಚೌಧರಿ ಸ್ಪರ್ಧೆ ಮಾಡಲಿದ್ದಾರೆ. ಮಹಾರಾಜ್‌ಗಂಜ್‌ನಲ್ಲಿ 2019ರಲ್ಲಿ ಸುಪ್ರಿಯಾ ಶ್ರೀನೇತಾ ಸ್ಪರ್ಧಿಸಿದ್ದರು. ಈ ಬಾರಿ, ನಟಿ ಕಂಗನಾ ರಾಣಾವತ್ ಅವರನ್ನು ಗೇಲಿ ಮಾಡಲು ಹೋಗಿ ಟಿಕೆಟ್ ವಂಚಿತರಾದರು. ಜಾರ್ಖಂಡ್ ರಾಜ್ಯದ ಕುಂತಿ ಕ್ಷೇತ್ರದಲ್ಲಿ ಕಾಳಿಚರಣ್ ಮುಂಡಾ, ಲೋಹರ್‌ದಾಗ್ ಕ್ಷೇತ್ರಕ್ಕೆ ಸುಖದೇವ್ ಭಗತ್, ಹಜಾರಿಭಾಗ್ ಕ್ಷೇತ್ರದಲ್ಲಿ ಜಯಪ್ರಕಾಶ್ ಭಾಯ್ ಪಟೇಲ್‌ಗೆ ಟಿಕೆಟ್ ನೀಡಲಾಗಿದೆ.

ಮಧ್ಯಪ್ರದೇಶದ ಗುಣಾ ಕ್ಷೇತ್ರದಿಂದ ರಾವ್ ಯಾದವೇಂದ್ರ ಸಿಂಗ್, ದಾಮೋದಲ್ಲಿ ತರವಾರ್‌ಸಿಂಗ್ ಲೋಧಿ ಮತ್ತು ವಿಧಿಶಾ ಕ್ಷೇತ್ರದಲ್ಲಿ ಪ್ರತಾಪ್ ಭಾನು ಶರ್ಮಾ ಅವರ ಸ್ಪರ್ಧೆಗೆ ಅವಕಾಶ ಮಾಡಿಕೊಡಲಾಗಿದೆ. ಗಾಂಧಿ-ನೆಹರು ಪರಿವಾರದ ಸಾಂಪ್ರದಾಯಿಕ ಕ್ಷೇತ್ರವಾದ ಅಮೇಥಿ ಮತ್ತು ರಾಯಬರೇಲಿ ಲೋಕಸಭಾ ಕ್ಷೇತ್ರಗಳಿಗೆ ಮಾತ್ರ ಇನ್ನೂ ಅಭ್ಯರ್ಥಿ ಆಯ್ಕೆಯಾಗಿಲ್ಲದಿರುವುದು ದೇಶದ ರಾಜಕೀಯ ಆಸಕ್ತರಲ್ಲಿ ಕುತೂಹಲ ಹೆಚ್ಚುವಂತೆ ಮಾಡಿದೆ.


## ಕಂಗನಾ ಬಗ್ಗೆ ಅಪ್ರಿಯ ಮಾತು; ಸುಪ್ರಿಯಾಗೆ ಕೈಕೊಟ್ಟ ಟಿಕೇಟು!

**ದೆಹಲಿ:** ಬಾಲಿವುಡ್ ನಟಿ, ಉತ್ತರಾಖಂಡ ರಾಜ್ಯದ 'ಮಂಡಿ' ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರಣಾವತ್ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕೆ ಕಾಂಗ್ರೆಸ್ ಪಕ್ಷದ ಅಧಿಕೃತ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತಾಗೆ ಶಿಕ್ಷೆಯಾಗಿದೆ. ಪಕ್ಷ ನೀಡಲಿದ್ದ ಲೋಕಸಭಾ ಟಿಕೆಟ್ಟನ್ನು ಸುಪ್ರಿಯಾ ಈಗ ಕಳೆದುಕೊಂಡಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಮಹಾರಾಜ್‌ಗಂಜ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸುಪ್ರಿಯಾ ಸ್ಪರ್ಧೆ ಮಾಡಿದ್ದರು. ಆದರೆ, ಬಿಜೆಪಿಯ ಪಂಕಜ್ ಚೌಧರಿ ವಿರುದ್ಧ ಸೋಲು ಕಂಡಿದ್ದರು. ಈ ಬಾರಿಯೂ ಇದೇ ಕ್ಷೇತ್ರದಲ್ಲಿ ಅವರನ್ನು ಪಕ್ಷ ಕಣಕ್ಕಿಳಿಸಲು ನಿರ್ಧರಿಸಿತ್ತು.

ನಟಿ ಕಂಗನಾ ಅವರಿಗೆ ಬಿಜೆಪಿ ಟಿಕೆಟ್ ಘೋಷಿಸಿದ ಬೆನ್ನಲ್ಲೇ ಅವರ ಬಗ್ಗೆ ಸುಪ್ರಿಯಾ ಸಾಮಾಜಿಕ ತಾಣದಲ್ಲಿ ನಿಂದನಾತ್ಮಕ ಮಾತು ಪ್ರಕಟಿಸಿದ್ದರು. ಉತ್ತರ ಪ್ರದೇಶದ ಮಹಾರಾಜ್‌ಗಂಜ್ ಲೋಕಸಭಾ ಕ್ಷೇತ್ರದ ಟಿಕೆಟ್ ಕೊಡಲು ಸಿದ್ಧತೆ ಮಾಡಿಕೊಂಡಿದ್ದ ಕಾಂಗ್ರೆಸ್, ಬಳಿಕ ನಿರ್ಧಾರ ಬದಲಿಸಿದೆ. ಸುಪ್ರಿಯಾ ಬದಲಾಗಿ ವೀರೇಂದ್ರ ಚೌಧರಿ ಅವರಿಗೆ ಆ ಕ್ಷೇತ್ರದ ಟಿಕೆಟ್ ನೀಡಿದೆ.

ಸುಪ್ರಿಯಾ ಇನ್‌ಸ್ಟಾಗ್ರಾಮ್‌ನಲ್ಲಿ ಕಂಗನಾ ರಣಾವತ್ ಅವರ ಮೈಮಾಟ ಪ್ರದರ್ಶನ ಫೋಟೊ ಹಂಚಿಕೊಂಡು, 'ಕ್ಯಾ ಭಾವ್ ಚಲ್ ರಹಾ ಹೈ ಮಂಡಿ ಮೆ ಕೋಯಿ




ಬತಾಯೇಗಾ?' (ಮಂಡಿಯಲ್ಲಿ ಯಾವ ಧಾರಣೆ ಇದೆ ಎಂದು ಯಾರಾದರೂ ಹೇಳುವಿರಾ?) ಎಂದು ಬರೆದಿದ್ದರು. ಈ ಪೋಸ್ಟ್‌ಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಜನಾಕ್ರೋಶ ವ್ಯಕ್ತವಾದ ಬಳಿಕ ಡಿಲೀಟ್ ಮಾಡಿದ್ದರು.

ಬಿಜೆಪಿ ದೂರಿನ ಬಳಿಕ ಈ ವಿಚಾರದಲ್ಲಿ ಕಾರ್ಯೋನ್ಮುಖವಾದ ಚುನಾವಣಾ ಆಯೋಗ ಬುಧವಾರ ಶ್ರೀನೇತಾ ಅವರಿಗೆ ಶೋಕಾಸ್ ನೋಟಿಸ್ ನೀಡಿದೆ.

## ಮಂಡೂಕ ಪಾರ ಜಿಗಿಜಿಗಿದಾಟ

### ಚಿತ್ರನಟ ಗೋವಿಂದ 2ನೇ ಇನ್ನಿಂಗ್ಸ್; ಶಿವಸೇನೆ ಸೇರ್ಪಡೆ


**ಮುಂಬೈ:** ಹೊಸ ಶೈಲಿ ನರ್ತನದಿಂದ ಹೆಸರು ಮಾಡಿದ್ದ ಬಾಲಿವುಡ್ ನಟ ಗೋವಿಂದ, ಮುಂಬೈಯಲ್ಲಿ ಗುರುವಾರ ಶಿಂದೆ ಬಣದ 'ಶಿವಸೇನೆ' ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ, ಗೋವಿಂದ ಅವರನ್ನು ಪಕ್ಷಕ್ಕೆ



ಬರಮಾಡಿಕೊಂಡರು. ವಾಯವ್ಯ ಮುಂಬೈ ಲೋಕಸಭಾ ಕ್ಷೇತ್ರದಿಂದ ಗೋವಿಂದ ಸ್ಪರ್ಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಶಿವಸೇನೆ ಸೇರುವ ವಿಚಾರವಾಗಿ ಮಾಸಾರಂಭದಲ್ಲೇ ಶಿಂದೆ ಜತೆ ಗೋವಿಂದ ಸಭೆ ನಡೆಸಿದ್ದರು. ಗೋವಿಂದ 2004ರಲ್ಲಿ ಕಾಂಗ್ರೆಸ್‌ನಿಂದ ಮುಂಬೈ ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಹಿರಿಯ ಬಿಜೆಪಿ ನಾಯಕ ರಾಮನಾಯಕ್ ಅವರನ್ನು ಸೋಲಿಸಿದ್ದರು. ನಂತರದ ವರ್ಷಗಳಲ್ಲಿ ವೃತ್ತಿಬದುಕಿನ ಅನಿವಾರ್ಯದ ಕಾರಣ ನೀಡಿ ಅವಧಿಗೂ ಮುನ್ನವೇ ಸಂಸತ್ ಸದಸ್ಯತ್ವ ತ್ಯಜಿಸಿ ರಾಜಕೀಯದಿಂದಲೇ ದೂರವಾಗಿದ್ದರು. ಈಗ 15 ವರ್ಷಗಳ ಬಳಿಕೆ ರಾಜಕೀಯಕ್ಕೆ ಮರಳಿ 2ನೇ ಇನ್ನಿಂಗ್ಸ್ ಆರಂಭಿಸುವ ಉತ್ಸಾಹದಲ್ಲಿದ್ದಾರೆ.

### ಬಿಜೆಡಿ ಸಂಸ್ಥಾಪಕ ಸದಸ್ಯ ಭರ್ತೃಹರಿ ಬಿಜೆಪಿಗೆ


**ದೆಹಲಿ:** ಭರ್ತೃಹರಿ ಮಹತಾಬ್, ಒಡಿಶಾದಲ್ಲಿನ ಆಡಳಿತ ಪಕ್ಷವಾದ 'ಬಿಜು ಜನತಾ ದಳ'(ಬಿಜೆಡಿ) ಸಂಸ್ಥಾಪಕ ಸದಸ್ಯರಲ್ಲೊಬ್ಬರು, 6 ಬಾರಿ ಸಂಸದರಾಗಿದ್ದವರು. ಅವರಿಗೂ ಬಿಜೆಡಿ ತೊರೆದು, ಗುರುವಾರ ದೆಹಲಿಯಲ್ಲಿ ಬಿಜೆಪಿಗೆ ಸೇರ್ಪಡೆಯಾದರು. ಇದೇ



ವೇಳೆ, ಬಿಜೆಡಿ ಪಕ್ಷದ ಮಾಜಿ ಸಂಸದ ಸಿದ್ಧಾಂತ ಮಹಾಪಾತ್ರ, ಪದ್ಮಶ್ರೀ ಪುರಸ್ಕೃತ ಸಂತಾಲಿ ಭಾಷೆ ಸಾಹಿತಿ ದಮಯಂತು ಬೇಷರ ಅವರೂ ಕಮಲ ಪಕ್ಷಕ್ಕೆ ಸೇರ್ಪಡೆಯಾದರು. ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ, ಬಿಜೆಪಿ ಹಿರಿಯ ನಾಯಕರಾದ ಧರ್ಮೇಂದ್ರ ಪ್ರಧಾನ್, ತಾವ್ಡೆ ಮತ್ತಿತರರು ಒಡಿಶಾದ ಹಿರಿಯ ರಾಜಕಾರಣಿಯನ್ನು ಕಮಲ ಪಕ್ಷಕ್ಕೆ ಬರಮಾಡಿಕೊಂಡರು. 'ಒಡಿಶಾ ರಾಜ್ಯದ ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೂಡಿ ಕೆಲಸ ಮಾಡಲು ಉತ್ಸುಕನಾಗಿರುವೆ' ಎಂದು ಭರ್ತೃಹರಿ ಹೇಳಿದರು.

### ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಸಾವಿತ್ರಿ ಜಿಂದಾಲ್

**ಚಂಡೀಗಢ:** ದೇಶದ ನಂ.1 ಶ್ರೀಮಂತ ಮಹಿಳೆ(2910 ಕೋಟಿ ಅಮೆರಿಕನ್ ಡಾಲರ್ ಮೌಲ್ಯದ ಸಂಪತ್ತಿನ ಒಡತಿ), ವಾಣಿಜ್ಯೋದ್ಯಮಿ, ಹರಿಯಾಣದ ಮಾಜಿ ಸಚಿವೆ ಸಾವಿತ್ರಿ ಜಿಂದಾಲ್, ಕಾಂಗ್ರೆಸ್ ತೊರೆದು ಗುರುವಾರ ಭಾರತೀಯ ಜನತಾ ಪಕ್ಷವನ್ನು



ಸೇರಿದ್ದಾರೆ. ಹಿಸ್ಸಾರ್‌ನಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಂದಾಲ್ ಉದ್ಯಮ ಸಂಸ್ಥೆಗಳ ಸಮೂಹದ ಒಡತಿಯೂ ಆದ ಸಾವಿತ್ರಿ ಜಿಂದಾಲ್ ಅವರು ಕಮಲ ಚಿಹ್ನೆಯ ಕೇಸರಿ ಬಾವುಟ ಸ್ವೀಕರಿಸಿ ಬಿಜೆಪಿಗೆ ಸೇರಿಕೊಂಡರು. ಈ ಸಂದರ್ಭ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಮಾಜಿ ಸಿಎಂ ಮನೋಹರಲಾಲ್ ಖಟ್ಟರ್ ಮತ್ತಿತರ ಬಿಜೆಪಿ ನಾಯಕರು ಉಪಸ್ಥಿತರಿದ್ದರು. ಇವರ ಪುತ್ರ, ಉದ್ಯಮಿ-ರಾಜಕಾರಣಿ ನವೀನ್ ಜಿಂದಾಲ್, ಮೊನ್ನೆಯಷ್ಟೇ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದರು. ಅಷ್ಟೇ ತ್ವರಿತವಾಗಿ ಲೋಕಸಭಾ ಚುನಾವಣೆಗೆ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ.